Clause 1, the long Title, the Preamble and the Enacting Formula were added to the Bill.

Motion to pass.

Sri D. K. NAIKAR.—Sir, I move :

"That the Mysore Court Fees and Suits Valuation (Amendment) Bill, 1972, be passed."

Mr. DEPUTY SPEAKER.—The question is :

"That the Mysore Court Fees and Suits Valuation (Amendment) Bill, 1972, be passed."

The motion was adopted and the Bill was passed.

MYSORE KHADI AND VILLAGE INDUSTRIES (AMENDMENT) BILL, 1972.

Motion to consider

Sri S. M. KRISHNA (Minister for Industries).—Sir, I beg to move :

"That the Mysore Khadi and Village Industries (Amendment) Bill, 1972, be taken into consideration."

Mr. DEPUTY SPEAKER.—Motion moved :

"That the Mysore Khadi and Village Industries (Amendment) Bill, 1972, be taken into consideration."

Sri C. M. ARUMUGAM.—May I submit to you Mr. Deputy Speaker, we have not received copies of the Bill.

Mr. DEPUTY SPEAKER.—All the Bills have been sent by post to the residences of Members. In fact. I got it by post. Some of them have been circulated here. I have taken up because I was convicted.

Sri C. M. ARUMUGAM.—When the Assembly is in Session, it would not be relevant to send any papers to the residences of Members. We have not received it.

Sri K. N. VEERAPPA GOWDA.—We have received copies by post.

Sri C. M. ARUMUGAM.—He might have received it. But some of us have not received it ; and in order to have full fledged discussion on this Bill, I would suggest that we adjourn today and meet tomorrow for this purpose and in the meantime this Bill could be supplied to us. If I do not have a copy of the Bill, I cannot speak on that. Now I am receiving it. I leave it to you Mr. Deputy Speaker.

Mr. DEPUTY SPEAKER.—It is supplied afresh. Mr.Arumugam is one of my respected and loved colleagues in this House. The Hon'ble Members of the House and even Mr. Hanume Gowda say that all of them have received copies at their residence. I have also said that. This item was included in yesterday's agenda and circulated yesterday. Yesterday evening the Hon'ble Member could have raised this subject. Since there is no animus or hatred against Hon'ble Members and all the Hon'ble Members are highly respected, and more so Sri Arumugam, I am sure that it has been sent by post. This has been substantiated by all the Hon'ble Members. Let us not pursue this when the Hon'ble Minister is already on his legs to move it for consideration.

† Sri S. M. KRISHNA.—Any way, this is a very simple Bill, Without even a reading and without any discussion the House can certainly O.K. this amendment.

These are harmless amendments to the Mysore State Khadi and Village Industries Board.

Till now, according to the present Act, there is a provision in the enactment that only an Accounts Officer by the State Government from amongst its officers could be appointed. But the amendment that I am moving today is that a financial adviser and a Chief Accounts Officer preferably drawn from the Indian Audit and Accounts Cadre may be appointed in the Mysore State Khadi and Village Industries Board.

There have been a number of criticisms made on the floor of the House about the manner in which the accounts in the Khadi and Village Industries Board is being maintained. It was honestly felt in our State also that a better financial discipline and accounts discipline will have to be brought within the frame work of the Khadi and Village Industries Board. As a result of our deliberations and studies, we have come to the conclusion that it will be in the interests and the better financing of the Khadi and Village Industries Board that it should have a financial Adviser and a Chief Accounts Officer drawn from among the officers of the Central Government and the State Government.

Secondly, the Khadi and Village Industries Commission grants loans and the State Government in turn advances funds to various institutions and societies registered under the Khadi and Village Industries Board. Till now, there was no provision of getting back the amounts that we have released or advanced by way of loans as an arrear of land revenue. Now the amendment that I am proposing through the Bill, is that any dues or any loans outstanding against any institution could be recovered as an arrear of land revenue.

The third salient feature of the Bill that I am proposing is that the Khadi and Village Industries Commission advances funds by

way of grants and loans to the State Khadi and Village Industries Board. These advances are made on the *bona fide* belief that the State Government stands Guarantee on behalf of the State Khadi and Village Industries Board. It now so happened that in Orissa where the Khadi and Village Industries Board was dissolved, after the dissolution of the Board, there was a certain legal lacuna as to how the funds owing to the Khadi and Village Industries Board could be recovered. In the amendment proposed, it is said that the State Government will be responsible for all the assets and liabilities of the Khadi and Village Industries Board.

Finally, there are a number of rules which are framed under the enactment. Now in every other State where there is the Khadi and Village Industries Board, there is an enactment to the effect that the rules that are framed by the Board should be placed on the Table of the Legislature. Unfortunately, in the present enactment, there is no such provision. As a result, I have thought of bringing in this amendment also under which it becomes necessary and obligatory on the part of the Khadi and Village Industries Board to place a copy of the rules that they frame, on the Table of the House.

Sir, these are some of the features of the amendment.

I am sure the House will readily give its acceptance to it.

† ಶ್ರೀ ಎಚ್. ಎಸ್. ಸಿದ್ಧಪ್ಪ (ಅರಸೀಕೆರೆ).—ಸನ್ಮಾನ್ಯ ಸಭಾಧ್ಯಕ್ಷರೇ, ಸರ್ಕಾರದವರು ಈಗ ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ಒಂದು ತಿದ್ದುಪಡಿಮಸೂದೆಯನ್ನು ತಂದಿದ್ದಾರೆ. ಇದನ್ನು ನೋಡಿದರೆ ನನಗೇನು ಅನ್ನಿಸುತ್ತದೆಂದರೆ, ಈ ತಿದ್ದುಪಡಿ ಮಸೂದೆಯಲ್ಲಿ ಅನೇಕ ಕ್ಲಾಜುಗಳನ್ನು ಜನತೆಯ ಪ್ರಯೋಜನಕ್ಕಾಗಿ ಇದರಲ್ಲಿ ಅಳವಡಿಸಿದ್ದಾರೆನ್ನುವ ನಂಬಿಕೆ ನನಗೇನೂ ಬಾರದೇ ಇರುವ ಹಾಗೆ ಇದೆ. ಕಳೆದ ಹತ್ತಾರು ವರ್ಷಗಳಿಂದಲೂ ಈ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ವ್ಯವಹಾರವನ್ನು ನಡೆಸಿರುವವರ ಬಗ್ಗೆ ಹಾಗೂ ಈಗ ಏನು ಅದರ ಆಡಳಿತವನ್ನು ನಡೆಸುತ್ತಿದ್ದಾರೋ ಅವರ ವ್ಯವಹಾರದ ಬಗ್ಗೆ ಮಾನ್ಯ ಮಂತ್ರಿಗಳು ಏನೇನು ವಿದ್ಯಮಾನಗಳು ನಡೆಯುತ್ತಿವೆ ಎನ್ನುವುದನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದರೆ ದುರದೃಷ್ಟವಶಾತ್ ಅವರಿಗೆ ಈಗ ಅಧಿಕಾರ ಸಿಕ್ಕಿ ಈಗ ಪುನಃ ಈ ಖಾದಿ ಮತ್ತು ಗ್ರಾಮೋದ್ಯೋಗವನ್ನು ಹೆಚ್ಚಿಗೆ ಬೆಳೆಸುವುದಕ್ಕೆ ಕೈಹಾಕಿರುವುದರಿಂದ ಇವತ್ತು ಈ ಮಸೂದೆಯನ್ನು ಅವರು ಈ ಸಭೆಯಮುಂದೆ ತಂದಿದ್ದಾರೆಂದು ನನಗನ್ನಿಸುತ್ತದೆ. ಇದರಲ್ಲಿ ಮೈಸೂರು ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ಒಬ್ಬ ಫೈನಾನಷಿಯಲ್ ಅಡ್ವೈಜರನ್ನು ಮತ್ತು ಚೀಫ್ ಅಕೌಂಟ್ಸ್ ಆಫೀಸರನ್ನು ನೇಮಕಮಾಡಬೇಕೆಂಬ ಮುಖ್ಯೋದ್ದೇಶ ಇರುವುದರಿಂದ ಮೈಸೂರಿನ ಒಬ್ಬ ಅಧಿಕಾರಿಯನ್ನು ಅಲ್ಲಿ ಫೈನಾನಷಿಯಲ್ ಅಡ್ವೈಜರಾಗಿ ಹಾಕುವುದಕ್ಕೆ ಈ ಒಂದು ತಿದ್ದುಪಡಿಯನ್ನು ಈಗ ತಂದಿದ್ದಾರೆಂದು ನನಗನ್ನಿಸುತ್ತದೆ. ಯಾರೋ ಒಬ್ಬ ಅಧಿಕಾರಿಯನ್ನು ಇವರ ಒಂದು ದೃಷ್ಟಿಯಲ್ಲಿಟ್ಟುಕೊಂಡು ಅವರನ್ನು ಆ ಒಂದು ಹುದ್ದೆಯಲ್ಲಿಅವರಿಗೆ ಈಗಾಗಲೇ ನಿರ್ಧಾರವಾಗಿರುವ ಹುದ್ದೆಯಿಂದ ಅವರನ್ನು ತೆಗೆದುಹಾಕಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆಂದು ನನಗೆ ಅನ್ನಿಸುತ್ತದೆ. ಆದರೆ ಈಗ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ಮಾಡುತ್ತಿರುವ ವ್ಯವಹಾರವನ್ನು ನೋಡಿದರೆ, ಆ ಆಡಳಿತವನ್ನು ಕೂಡಲೇ ಬದಲಾಯಿಸಬೇಕೆಂದು ಹೇಳುತ್ತೇನೆ. ಇಂತಹ ನಂದರ್ಭದಲ್ಲಿ ಅಲ್ಲಿಗೆ ಒಬ್ಬ ಫೈನಾಷಿಯಲ್ ಅಡ್ವೈಜರನ್ನು ಮತ್ತು ಚೀಫ್ ಅಕೌಂಟ್ ಆಫೀಸರನ್ನು ಹಾಕುವುದು ಅನಾವಶ್ಯಕವೆಂದು ನನಗನ್ನಿಸುತ್ತದೆ. ಕ್ಲಾಜು 22 (ಎ) ಪ್ರಕಾರ ರ್ಯಾಂಡ್ ರೆವಿನ್ಯೂ ಬಾಕಿಯನ್ನು ವಸೂಲುಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡುವಂತಹ ಬದಲಾವಣೆಯನ್ನು ಇದರಲ್ಲಿ ಮಾಡಿದ್ದಾರೆಂದು ನನಗನಿಸುತ್ತದೆ, ಇದುವರೆಗೆ ಈ ಖಾದಿ ಬೋರ್ಡಿನವರು ಏನು ಸಾಲ ಸೋಲಗಳನ್ನು ಕೊಟ್ಟಿದ್ದಾರೆ ಅಂಥವರಿಗೆ ಯಾವ ಜಪ್ತಿನು ಸಹ ಇರುವುದಿಲ್ಲ.

(ಶ್ರೀ ಎಚ್. ಎಸ್. ಸಿದ್ದಪ್ಪ)

5-00 P.M.

[MADAM SPEAKEER in the Chair]

ನೀವು ಇವತ್ತು ಕಂದಾಯ ಬಾಕಿ ಹೇಗೆ ವಸೂಲ ಮಾಡುತ್ತೀರೋ ಹಾಗೆಯೇ ಬೋರ್ಡಿಗೆ ಬರಬೇಕಾದ ಹಣವನ್ನು ವಸೂಲು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಹೇಳಿದರೂ ಯಾವ ಪ್ರಯೋಜನವೂ ಇಲ್ಲ. ಅಲ್ಲಿರತಕ್ಕಂತಹ ರೆವಿನ್ಯೂ ಇನ್ಸ್‌ಪೆಕ್ಟರ್ ಹುಡುಕಿ ಹುಡುಕಿ ಯಾವ ಜಮೀನು ಸಿಗದೆ ಬರಬೇಕಾಗುತ್ತದೆ. ಅವರಿಗೆ ಕೆಲಸ ಹೆಚ್ಚಿಗೆಯಾಗುವುದಲ್ಲದೆ ಬೇರೇನೂ ಆಗುವುದಿಲ್ಲ. ಬೋರ್ಡಿನವರು ಯಾರ್ಯಾರಿಗೆ ಸಾಲ ಕೊಟ್ಟಿದ್ದಾರೆಂಬುದನ್ನು ಅಮೂರ್ತವಾಗಿ ತನಿಖೆ ಮಾಡಿದ್ದೇ ಆದರೆ ಇವತ್ತು ಈ ರೀತಿಯ ತಿದ್ದುಪಡಿ ತರುತ್ತಿರಲಿಲ್ಲವೆಂದು ನನಗನಿಸುತ್ತದೆ. ಉದಾಹರಣೆಗೆ ನಮ್ಮ ಊರಿನಲ್ಲಿ ಎರಡು ಸಹಕಾರ ಸಂಘಗಳಿಗೆ ಈ ಖಾದೀ ಬೋರ್ಡಿನವರು ಸಾಲ ಕೊಟ್ಟಿದ್ದಾರೆ. ಒಂದನೆಯದು ಅಲ್ಲ ಒಂದು ನಾಡು ಗಾಣ ಸಹಕಾರೀ ಸಂಘ ಎಂದು ಇದೆ. ಅದಕ್ಕೆ ಸಾಲ ಕೊಟ್ಟಿದ್ದಾರೆ. ಆದರೆ ಆ ಸಹಕಾರೀ ಸಂಘವನ್ನು ಇಡೀ ಊರಿನಲ್ಲಿ ಹುಡುಕಿದರೂ ಸಿಗುವುದಿಲ್ಲ. ಹೀಗಿರುವಾಗ ಕೊಟ್ಟ ಹಣವನ್ನು ಅವರಿಂದ ಹೇಗೆ ವಸೂಲು ಮಾಡುತ್ತೀರಿ? ಅಲ್ಲಿ ಸೊಸೈಟಿ ಇಲ್ಲದಿದ್ದರೂ ಸೊಸೈಟಿಯ ಹೆಸರಿನಲ್ಲಿ ಸಾಲ ಕೊಡುತ್ತಿದ್ದಾರೆ. ಇನ್ನೊಂದು ಹಾರನ ಹಳ್ಳಿಯಲ್ಲಿ ಒಂದು ಚರ್ಮದ ಕೈಗಾರಿಕಾ ಸಹಕಾರ ಸಂಘಕ್ಕೆ ಸಾಲಕೊಟ್ಟಿದ್ದಾರೆ. ಅಧಿಕಾರಿಗಳಿಗೆ ಅಲ್ಲಿ ಚರ್ಮದ ಕೈಗಾರಿಕೆಯನ್ನು ಬೆಳೆಸಬೇಕು, ಆದರಿಂದ ಹರಿಜನರಿಗೆ ಉದ್ಯೋಗ ದೊರೆಯಬೇಕು ಮತ್ತು ಅವರ ಜೀವನ ಮಟ್ಟ ಉತ್ತಮಗೊಳ್ಳಬೇಕೆಂಬ ನಿಷ್ಠೆ ಇದ್ದಿದ್ದರೆ, ಆ ಸೊಸೈಟಿ ಇಡೀ ಜಿಲ್ಲೆಯಲ್ಲೇ ಒಂದು ಉತ್ತಮವಾದ ಚರ್ಮದ ಸೊಸೈಟಿಯಾಗುತ್ತಿತ್ತು. ಆದರೆ ಆ ಸೊಸೈಟಿಯ ಹಣವನ್ನು ಅಧಿಕಾರಿಗಳು ನನಗೆ ಅಷ್ಟು ಕೊಡು, ಇಷ್ಟು ಕೊಡು ಎಂದು ಹಂಚಿಕೊಂಡು ಹಾಳು ಮಾಡಿಬಿಟ್ಟರು. ಇದಕ್ಕೋಸ್ಕರ ಅರಣ್ಯ ಇಲಾಖೆಯಿಂದ ಮರವನ್ನು ಪಡೆಯುವುದಕ್ಕೋಸ್ಕರ ಪರ್ಮಿಟ್ ಪಡೆದು, ಆ ಮರವನ್ನು ಬೆಂಗಳೂರಿನಲ್ಲಿ ತಮ್ಮ ತಮ್ಮ ಮನೆಗಳನ್ನು ಕಟ್ಟುವುದಕ್ಕೆ ಉಪಯೋಗಿಸಿಕೊಂಡರು. ಇಂತಹ ಅವ್ಯವಹಾರ ಈ ಖಾದಿ ಗ್ರಾಮೋದ್ಯೋಗ ಮಂಡಳಿಯಲ್ಲಿ ನಡೆಯುತ್ತಿದೆ. ಇದರಲ್ಲಿ ಬದಲಾವಣೆಗಳನ್ನು ಮಾಡದೆ, ಮತ್ತಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಇದು ನಿಜವಾಗಿಯೂ ರಾಜ್ಯದಲ್ಲಿ ಕೆಲವೊಂದು ಸುಖಲೋಲುಪತೆಯಲ್ಲಿರುವ ಜನರಿಗೆ ಮತ್ತಷ್ಟು ಹೆಚ್ಚಿನ ಅವಕಾಶವನ್ನು ಮಾಡಲು ಮಾರ್ಗ ತೋರಿಸಿ ಕೊಡುತ್ತೀರಿ ಎಂದು ಹೇಳುತ್ತೇನೆ.

ಇನ್ನು ಟ್ರಿಬ್ಯೂನಲ್ ಮಾಡುವ ವಿಚಾರ. ಯಾರು ಚುನಾವಣೆಯಲ್ಲಿ ಸೋತಿರುತ್ತಾರೆ, ಯಾರಿಗೆ ಮಂತ್ರಿ ಪದವಿ ಸಿಗಲಿಲ್ಲ, ಅಂಥವರಿಗೆ ಇದರಲ್ಲಿ ಒಂದು ಅಧ್ಯಕ್ಷ ಸ್ಥಾನವನ್ನು ಕೊಡುವುದಕ್ಕೋಸ್ಕರ ಇದನ್ನು ಮಾಡಿದ್ದೀರೆಂದು ತಿಳಿಯುತ್ತೇನೆ. ಇದರಲ್ಲಿ ಇಡೀ ವರ್ಷಕ್ಕೆ ಒಂದು ನಾಲ್ಕಾರು ಕೇಸುಗಳು ಬರಬಹುದು. ಹಾಗಿರುವಾಗ ಇದು ಏಕೆ ಬೇಕು? ಇದನ್ನು ಕೋಆಪರೇಟಿವ್ ಟ್ರಿಬ್ಯೂನಲ್ಲಿಗೋ, ಅಥವಾ ರೆವೆನ್ಯೂ ಟ್ರಿಬ್ಯೂನಲ್ಲಿಗೋ ಲಗತ್ತಿಸಿರಿಸಿದರೆ ಸಾಕಾಗಿತ್ತು ಎಂದು ನನಗನಿಸುತ್ತದೆ. ಈಗಾಗಲೇ ಯಾವ್ಯಾವ ಟ್ರಿಬ್ಯೂನಲಿನಲ್ಲಿ ಯಾವಾವ ರೀತಿಯಲ್ಲಿ ಕೆಲಸಗಳು ನಡೆಯುತ್ತವೆ ಎಂದು ನಾವು ತಿಳಿದುಕೊಂಡಿದ್ದೇವೆ. ಮಾನ್ಯ ಮಂತ್ರಿಯವರಿಗೂ ಅದು ಗೊತ್ತಿದೆ. ಅವರು ಅಧಿಕಾರದಲ್ಲಿರುವುದರಿಂದ ಇದನ್ನು ತರುತ್ತಿದ್ದಾರೆಂದು ಕಾಣುತ್ತದೆ. ಇಲ್ಲಿ ನಡೆಯುತಕ್ಕ ಅನ್ಯಾಯಗಳನ್ನು ನೋಡಿ ಅವರಿಗೂ ವ್ಯಥೆಯಾಗಿದೆಯೆಂದು ತಿಳಿಯುತ್ತೇನೆ. ಇವತ್ತು ಖಾದಿ ಗ್ರಾಮೋದ್ಯೋಗದ ಆಶ್ರಯದಲ್ಲಿ ಅನೇಕ ಕೋಟ್ಯಾಣದ ಅಕ್ಕಿಯ ಸಂಘಗಳನ್ನು ನಡೆಸುತ್ತಿದ್ದಾರೆ. ಇವುಗಳಿಂದ ಯಾವ ಜನರಿಗೆ ಅನುಕೂಲವಾಗುತ್ತದೆ? ಬೋರ್ಡಿನಲ್ಲಿರತಕ್ಕ ಅಧಿಕಾರಿವರ್ಗದ ಜನರನ್ನು ನೋಡಿದರೆ ಅದರಿಂದ ಯಾರಿಗೆ ಅನುಕೂಲವಾಗುತ್ತದೆಂದು ತಿಳಿಯುತ್ತದೆ, ಅದೇ ರೀತಿ ಈಗ ಟರ್ಬನ್ ಯಾರ್ನದಲ್ಲಿ ಈ ಖಾದಿಯ ಆಕರ್ಷಣೆಯೇ ಹೊರಟು ಹೋಗಿಬಿಟ್ಟಿದೆ. ಹೀಗಿರುವಾಗ ಪುನಃ ನಾವು ಇಂಜೆಕ್ಷನ್ ಕೊಟ್ಟು ಅದನ್ನು ಉತ್ಪಾದನಕರವಾಗಿ ಮಾಡುತ್ತೇವೆಂದು ಹೇಳಿ ಹೊರಟಿರುವುದು ನೋಡಿದರೆ ನಿಜವಾಗಿಯೂ ನನಗೆ ವ್ಯಥೆಯಾಗುತ್ತದೆ. ಇದು ಒಂದು ಹಣ ಕಾಸನ್ನು ಪೋಲು ಮಾಡತಕ್ಕ ಇಲಾಖೆ ಎಂದು ಹೇಳುತ್ತೇನೆ. ಇದರ ಮೂಲ ಧ್ಯೇಯವೇನೆಂದರೆ, ನಿಮ್ನ ವರ್ಗದ ಜನರಿಗೆ- ಬಡಬಗ್ಗರಿಗೆ, ಮತ್ತು ಹೊಟ್ಟೆಗಿಲ್ಲದ ಜನರಿಗೆ ಅನುಕೂಲವಾಗಲಿ ಮತ್ತು ಅವರ ಜೀವನ ಸುಗಮವಾಗಿ ನಡೆಯಲು ಒಂದು ಅವಕಾಶ ಇದರಲ್ಲಿ ಒದಗಲಿ ಎಂದು ಹಿಂದಿನ ನಾಯಕರು ಈ ಇಲಾಖೆಯನ್ನು ಮಾಡಿದರು. ಆದರೆ ಇವೊತ್ತಿನ ದಿವಸ ಏನಾಗಿದೆ ಇದರ ವ್ಯವಸ್ಥೆ ವಿಪರೀತಕ್ಕೆ ಹೋಗಿದೆ. ಇದರ ಹಿಂದಿನ ಒಬ್ಬ ಅಧ್ಯಕ್ಷರು ವಿಹಾರದಲ್ಲೋ, ರಾಜಸ್ಥಾನದಲ್ಲೋ

ಎಗ್ಸಿಬಿಷನ್ನಿನಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಯ ಬಟ್ಟೆಗಳನ್ನು ಮೈಸೂರು ಖಾದಿ ಬೋರ್ಡಿನ ಹೆಸರಿಗೆ ಬಿಲ್ ಹಾಕಿಸಿ ತೆಗೆದುಕೊಂಡು ಬಂದರು. ಕೆಲವು ಸಮಯದ ನಂತರ ಅವರು ನಿವೃತ್ತಿಯಾದರು. ಆದರೆ ಆ ಬಟ್ಟೆಗಳು ಯಾವ ಲೆಕ್ಕಕ್ಕೆ ಹೋಗಿವೆ ಎಂದು ಗೊತ್ತೇ ಇಲ್ಲ. ಅವರು ಇನ್ನೂ ಬಿಲ್ ಬಗ್ಗೆ ರಿಮೈಂಡರ್ಸ್ ಕಳಿಸುತ್ತಲೇ ಇದ್ದಾರೆ. ಈ ರೀತಿಯ ವ್ಯವಹಾರ ನಡೆದಿದೆ. ನನಗನ್ನಿಸುತ್ತದೆ, ನೀವು ಈ ರೀತಿ ತಿದ್ದುಪಡಿ ತರುವುದಕ್ಕಿಂತ ಮೊದಲು ಅಲ್ಲಿರತಕ್ಕಂತಹ ವಿಚಾರಗಳ ಬಗ್ಗೆ, ಅವ್ಯವಹಾರಗಳ ಬಗ್ಗೆ ಸರಿಯಾದ ತನಿಖೆ ನಡೆಸಿ ಯಾರು ತಪ್ಪಿತಸ್ಥರು ಇದ್ದಾರೋ ಅವರನ್ನು ಶಿಕ್ಷೆಗೆ ಒಳಪಡಿಸಿ, ಅನ್ಯಾಯವನ್ನು ಸರಿಪಡಿಸಿ, ನಂತರ ಸಮಾಜವಾದದ ತಿರುಳನ್ನು ಪೋಣಿಸಿಕೊಳ್ಳಲು ಯೋಗ್ಯರಾದ ಅಧಿಕಾರಿಗಳನ್ನು ಇಲ್ಲಿ ಹಾಕಿದರೆ ಫಲಕಾರಿಯಾಗುತ್ತದೆಂದು ತಿಳಿಯುತ್ತೇನೆ.

ಇನ್ನು 30 (ಎ) ಯಲ್ಲಿ ಇಲ್ಲಿರತಕ್ಕ ಕಮಿಟಿಯನ್ನು ಇವರಿಗೆ ಇಷ್ಟಬಂದ ಹಾಗೆ ತೆಗೆದು ಹಾಕತಕ್ಕ ಅವಕಾಶ ಇಟ್ಟಿದ್ದಾರೆ. ಇದು ಪ್ರಜಾಪ್ರಭುತ್ವದ ತತ್ವವಲ್ಲ. ಇವತ್ತು ಒಂದು ಸರ್ಕಾರ ಇರಬಹುದು, ನಾಳೆ ಇನ್ನೊಂದು ಸರ್ಕಾರ ಇರಬಹುದು ಒಬ್ಬರಿಗೆ ಇಷ್ಟ ಇಲ್ಲದಿದ್ದಿರೆ ನಾಳೆ ಅವರನ್ನು ತೆಗೆದುಹಾಕಬಹುದು. ಆದ್ದರಿಂದ ಪೌರಸಭೆ ಮತ್ತು ಅಭಿವೃದ್ಧಿ ಮಂಡಲಿಗಳಲ್ಲಿ ಯಾವ ರೀತಿ ಜನರಿಂದ ಚುನಾಯಿತ ಪ್ರತಿನಿಧಿಗಳು ಇರುತ್ತಾರೋ, ಆ ರೀತಿ ಮಾಡುವುದು ಒಳ್ಳೆಯದೆಂದು ನೋಡಿಸಿ, ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರುಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಬಹಳ ಕಾಲದಿಂದ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ಬಗ್ಗೆ ಅದರ ಬೋರ್ಡಿನ ಬಗ್ಗೆ ನಮ್ಮ ರಾಜ್ಯದಲ್ಲಿ ಅನೇಕ ಸಾರಿ ಈ ಮಾನ್ಯ ಸಭೆಯಲ್ಲಿ ಕೋಲಾಹಲ ಉಂಟಾದದ್ದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ನಮ್ಮ ರಾಜ್ಯದ ಮಟ್ಟಿಗೆ ನೋಳುವುದಾದರೆ ಈ ಖಾದಿ ಬೋರ್ಡ್ ಏನಿದೆ ಇದು ನಮ್ಮ ಚನ್ನಬಸಪ್ಪನವರು ಕರೆಯುವಕರ್ಮಕಾಂಡ ಹೇಗೋ ಹಾಗೇ ಖಾದಿ ಬೋರ್ಡಿನ ಮರ್ಮಕಾಂಡ ಇದೆ. ಖಾದಿ ಬೋರ್ಡಿನಲ್ಲಿ ಲಕ್ಷ ಲಕ್ಷಗಟ್ಟಲೆ ಲೂಟಿ ಆಗಿದೆ. ಮಾಕಾ ಪುಣ್ಯಾತ್ಮ ಬಾಪೂಜಿಯವರು ಯಾವುದೋ ಒಂದು ಘನ ಉದ್ದೇಶದಿಂದ ಈ ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ಕಲ್ಪನೆಯನ್ನು ಇಟ್ಟುಕೊಂಡು ಇಂಥಾ ಒಂದು ಖಾದಿ ಬೋರ್ಡು ಬೇಕು ಎಂದು ಸ್ಥಾಪನೆ ಮಾಡಿದ್ದರು. ಆದರೆ ಅವರುಕಾಲವಾದ ನಂತರ ಅವರ ಗುರಿಯೆಲ್ಲವೂ ಕೂಡ ದೂರವಾಗಿ ಖಾದಿ ಜನರು ಕಾಕಿ ಜನರ ಹಾಗೆ ವರ್ತಿಸಿಕೊಂಡು ಬಂದಿರುವುದಕ್ಕೆ ಬೇಕಾದಷ್ಟು ಉದಾಹರಣೆಗಳು ಇವೆ. ಪವಿತ್ರವಾದ ಮಹಾತ್ಮಾ ಗಾಂಧೀಜಿಯವರ ಹೆಸರಿನಲ್ಲಿ ಈ ಖಾದಿ ಬೋರ್ಡಿನಲ್ಲಿ ಹಣದ ಲೂಟಿ ನಡೆದಿರುವುದಕ್ಕೆ ಬೇಕಾದಷ್ಟು ಸಾಕ್ಷಿಗಳು ಇವೆ. ಹಿಂದಿನ ಅಧ್ಯಕ್ಷರ ಬಗ್ಗೆಯೂ ಇದೇ ವಿಧಾನ ಸಭೆಯಲ್ಲಿ ಬೇಕಾದಷ್ಟು ದೂರುಗಳು ಬಂದಿವೆಯೆಂದು ನಾನು ಕೇಳಿದ್ದೇನೆ. ಇಂದಿನ ಅಧ್ಯಕ್ಷರ ಬಗ್ಗೆಯೂ ದೂರುಗಳು ಬಂದಿವೆ ಎಂದು ನಾನು ಕೇಳಿದ್ದೇನೆ. ಒಟ್ಟಿನಲ್ಲಿ ದೇಶದಲ್ಲಿ ಖಾದಿ ಬೋರ್ಡ್ ಏನಿದೆ ಇಡಿಕ್ಕೆ ಏನು ಹಣ ಖರ್ಚಾಗಿದೆ ಇದರಲ್ಲಿ ವ್ಯವಹಾರಗಳು ಮತ್ತು ಅವ್ಯವಹಾರಗಳು ಏನು ನಡೆದಿವೆ ಅವುಗಳ ಬಗ್ಗೆ ಸರಿಯಾದ ತನಿಖೆ ಆಗುವುದು ಅವಶ್ಯಕವಿದೆ. ಇದರ ಜೊತೆಗೆ ಇವೊತ್ತಿನದಿವಸ ಈ ಸಭೆಯಲ್ಲಿ ಈ ಕಾಯಿದೆಯನ್ನು ಪಾಸುಮಾಡಿದಕೂಡಲೇ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಈ ಖಾದಿ ಬೋರ್ಡನ್ನು ಪೊಲೀಸ ಸರ್ಕಾರ ವಶಪಡಿಸಿಕೊಳ್ಳಬೇಕು. ಹಿಂದಿನಿಂದ ಇಂದಿನವರೆಗೆ ಈ ಖಾದಿ ಬೋರ್ಡಿನಲ್ಲಿ ಏನೇನು ಅವ್ಯವಹಾರ ನಡೆದಿದೆ ಅದರ ಬಗ್ಗೆ ಒಂದು ತನಿಖೆಯನ್ನು ಮಾಡಿ ಅದರ ವರದಿಯನ್ನು ಈ ಶಾಸನಸಭೆಯಮುಂದೆ ಇಡಬೇಕು. ಅದರ ಜೊತೆಗೆ ಯಾರ ಯಾರಿಂದ ಈ ಅವ್ಯವಹಾರ ನಡೆದಿದೆ ಆ ಅವ್ಯವಹಾರಗಳ ಬಗ್ಗೆ ಸಂಪೂರ್ಣವಾಗಿ ನ್ಯಾಯಾಂಗ ತನಿಖೆಯಾಗಬೇಕೆಂದು ನಾನು ಹೇಳುತ್ತೇನೆ. ಮಹಾತ್ಮಾ ಗಾಂಧೀಜಿಯವರ ತತ್ವಕ್ಕೆ ಈ ಖಾದಿಬೋರ್ಡಿನಲ್ಲಿ ತಿರಾಂಜಲಿಯನ್ನು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಈ ಖಾದಿ ಬೋರ್ಡಿನಲ್ಲಿ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ ಆ ಮೂಲಾಗ್ರವಾಗಿ ನ್ಯಾಯಾಂಗ ತನಿಖೆ ಆಗಬೇಕೆಂದು ನಾವು ಒತ್ತಾಯ ಮಾಡಿದರೆ ಅದನ್ನು ಸರ್ಕಾರದವರು ನಿರಾಕರಿಸುವುದಕ್ಕಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಖಾದೀ ಬೋರ್ಡಿನಲ್ಲಿ ನಾನಾ ವಿಭಾಗಗಳಿವೆ. ಕೊಟ್ಟಣದ ಅಕ್ಕಿ ಒಂದು ವಿಭಾಗ, ಚರ್ಮವನ್ನು ಹದ ಮಾಡುವುದು ಮತ್ತೊಂದು ವಿಭಾಗ. ಚರ್ಮವನ್ನು ಹದಮಾಡುವುದರಲ್ಲಿ ಬಹಳ ಜನ ಬಡವರ ಚರ್ಮ ಹದ ಆಯಿತು. ಹಲವಾರು ಬಡವರ ಹೆಸರಿನಲ್ಲಿ ಚರ್ಮ ಹದಮಾಡುವುದಕ್ಕೆ ತೆಗೆದುಕೊಂಡ ಹಣದಲ್ಲಿ ಚರ್ಮವನ್ನು ಹದ ಮಾಡಿದ್ದಾರೆಯೇ ಹೇಗೆ ಎಂಬುದನ್ನು ಲೆಕ್ಕ ತೆಗೆದುಕೊಂಡಿದ್ದೀರಾ ? ಆ ಹಣದಲ್ಲಿ ಯಾರು ಯಾರು ಏನು ಮಾಡಿದ್ದಾರೆ ಎಂಬುದನ್ನು ತನಿಖೆ ಮಾಡಿದ್ದೀರಾ? ಕೊಟ್ಟಣದ ಅಕ್ಕಿಯನ್ನು ತಯಾರು ಮಾಡುವುದಕ್ಕೆ ಖಾದಿ ಬೋರ್ಡಿನಲ್ಲಿ ಹಣವನ್ನು ಕೊಟ್ಟಿದ್ದಾರೆ ಈ ಕೊಟ್ಟಣದ ಅಕ್ಕಿಯನ್ನು ಮಾಡುವುದಕ್ಕೆ ಆಂಧ್ರ

(ಶ್ರೀ ಕೋಣಂದೂರು ಲಿಂಗಪ್ಪ)

ಮದ್ರಾಸಿನಿಂದ ಬತ್ತವನ್ನು ತೆಗೆದುಕೊಂಡು ಬಂದಿದ್ದಾರೆ. ನಮ್ಮಲ್ಲಿ ಬತ್ತ ಸಿಕ್ಕುವುದಿಲ್ಲವೇ ? ಕೊಟ್ಟಣದ ಅಕ್ಕಿಯನ್ನು ಮಾಡುವುದಕ್ಕೆ ಒಂದು ಏಜೆನ್ಸಿ ಇದೆ. ಅವರು ಸರ್ಕಾರದಿಂದ ಖಾದಿ ಬೋರ್ಡಿನ ಹೆಸರಿನಲ್ಲಿ ಹಣವನ್ನು ಮಂಜೂರು ಮಾಡಿಸಿಕೊಂಡು ಲಕ್ಷಗಟ್ಟಲೆ ಹಣವನ್ನು ಹೊಡೆಯುತಕ್ಕ ಒಂದು ಸುಭದ್ರವಾದ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಖಾದಿ ಬೋರ್ಡಿನ ವಿಚಾರಗಳು ಮಾನ್ಯ ಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣಾ ಅವರಿಗೆ ಗೊತ್ತಿಲ್ಲದೆ ಇಲ್ಲ. ಅವರೂ ಸಹ ನಮ್ಮ ಕಡೆಯಿಂದ ಆ ಕಡೆಗೆ ಹೋದವರು. ಆದ್ದರಿಂದ ಅವರಿಗೆ ಈ ಖಾದಿ ಬೋರ್ಡಿನ ವ್ಯವಹಾರಗಳೆಲ್ಲವೂ ಚೆನ್ನಾಗಿ ಮನದಟ್ಟಾಗಿರಬಹುದು ಎಂದು ನಾನು ಭಾವಿಸುತ್ತೇನೆ. ಹಿಂದಿನಿಂದಲೂ ಇದ್ದ ಖಾದಿಬೋರ್ಡಿನ ಅಧ್ಯಕ್ಷರುಗಳು ಸಾಮಾನ್ಯವ್ಯಕ್ತಿಗಳಲ್ಲ. ಅವರು ಖಾದಿಬೋರ್ಡಿನಲ್ಲಿ ಧಾರಾಳವಾಗಿ ಎಲ್ಲಾ ಸವಲತ್ತುಗಳನ್ನೂ ಪಡೆದುಕೊಂಡು ಸಾಕಷ್ಟು ಟಿ. ಎ. ಡಿ. ಎ. ಅನ್ನು ಪಡೆದುಕೊಂಡಿದ್ದಾರೆ. ಖಾದಿಬೋರ್ಡು ಇರುವುದು ಸಾಮಾನ್ಯ ಜನಗಳಿಗೆ ಹಳ್ಳಿಗರಿಗೆ ನಿರುದ್ಯೋಗವನ್ನು ಹೋಗಲಾಡಿಸುವುದರ ಸಲುವಾಗಿ. ಆದರೆ ಇವೊತ್ತು ಈ ಖಾದಿಬೋರ್ಡಿನ ಕೆಲಸಕಾರ್ಯಗಳು ಮತ್ತು ಅಧ್ಯಕ್ಷರುಗಳು ನಡೆಯುತ್ತಾ ಇರತಕ್ಕ ರೀತಿಯನ್ನು ನೋಡಿದರೆ ಮನಸ್ಸಿಗೆ ಬೇಸರವಾಗುತ್ತದೆ. ಈ ಖಾದಿಬೋರ್ಡಿನ ಕೆಲಸಕಾರ್ಯಗಳು ಯಾವರೀತಿಯಲ್ಲಿ ನಡೆಯಬೇಕಾಗಿತ್ತೊ ಆ ರೀತಿ ನಡೆಯುತ್ತಿಲ್ಲ. ಅದರಲ್ಲಿ ಅನೇಕ ಅವ್ಯವಹಾರಗಳು ನಡೆದಿವೆ. ಆದ್ದರಿಂದ ಈ ಬೋರ್ಡಿನಲ್ಲಿ ಮಂಜೂರಾಗಿರತಕ್ಕ ಪ್ರತಿಯೊಂದು ಕಾಸಿನ ಬಗ್ಗೆಯೂ ವಿಚಾರಣೆ ಯಾಗಬೇಕು. ಈ ಮಂಡಲಿಯ ವ್ಯವಹಾರಗಳ ಬಗ್ಗೆ ತನಿಖೆ ಆಗಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈ ಒಂದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಮೂಲಕ ಬೇಕಾದಷ್ಟು ಕೈಗಾರಿಕೆಗಳನ್ನು ನಡೆಸುವುದಕ್ಕೆ ಸಾಧ್ಯವಿದೆ. ದುರಾದೃಷ್ಟದ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಶಿವಮೊಗ್ಗದಲ್ಲಿ ಒಂದು ಬೆಂಕಿಕಡ್ಡಿ ಕಾರ್ಖಾನೆ ಇದೆ. ಅದು ಈ ಖಾದಿಬೋರ್ಡ್ ಬಂದಮೇಲೆ ಬಂದ್ ಆಯಿತು. ಇದರ ಬಗ್ಗೆ ಸಾಕಷ್ಟು ಸಾರಿ ಖಾದಿಬೋರ್ಡ್ ಮುಖಾಂತರ ಸಾರ್ವಜನಿಕ ಬೆಂಕಿಕಡ್ಡಿ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂದು ಒತ್ತಾಯ ಬಂದಿದೆ. ಆದರೆ ಖಾದಿಬೋರ್ಡಿನವರು ಇನ್ನೂ ಬೆಂಕಿಕಡ್ಡಿ ಕಾರ್ಖಾನೆಯನ್ನು ಆರಂಭ ಮಾಡಿಲ್ಲ. ಸರ್ಕಾರವೂ ಈ ಬಗ್ಗೆ ಮನಸ್ಸು ಮಾಡಿಲ್ಲ. ಆದ್ದರಿಂದ ಸರ್ಕಾರವೇ ಈ ಕಾರ್ಖಾನೆಯನ್ನು ತೆಗೆದುಕೊಂಡು ನಡೆಸಬೇಕು. ಇಲ್ಲದಿದ್ದರೆ ಅದನ್ನು ಒಂದು ಸಾರ್ವಜನಿಕ ಸಹಕಾರಿ ಸಂಘದ ಮೂಲಕ ನಡೆಸುವುದಕ್ಕೆ ಯಾರಾದರೂ ಮುಂದೆ ಬಂದರೆ ಅಂಥವರಿಗೆ ಕೊಟ್ಟರೆ ಆ ಬಗ್ಗೆ ನಮ್ಮ ಅಕ್ಷೇಪಣೆ ಇಲ್ಲ. ಈ ಖಾದಿ ಬೋರ್ಡಿನಮುಖಾಂತರ ಜಿಲ್ಲಾ ಮತ್ತು ತಾಲ್ಲೂಕಿಗೆ ಒಂದೊಂದು ಕೈಗಾರಿಕೋದ್ಯಮವನ್ನು ಆರಂಭಿಸುವುದಕ್ಕೆ ಸಾಧ್ಯವಿದೆ. ಮುಖ್ಯವಾಗಿ ಬೆಂಕಿಕಡ್ಡಿ ಕಾರ್ಖಾನೆ ಕೊಟ್ಟಣದ ಅಕ್ಕಿ ಮುಂತಾದ ಅನೇಕ ಸಣ್ಣ ಸಣ್ಣ ಕಾರ್ಖಾನೆಗಳನ್ನು ಈ ಖಾದಿಬೋರ್ಡಿನ ಮೂಲಕ ಸ್ಥಾಪಿಸುವುದಕ್ಕೆ ಸಾಧ್ಯವಿದೆ. ಈ ಬೋರ್ಡಿನಲ್ಲಿ ರಾಜ್ಯಾದ್ಯಂತ ಅನೇಕ ಜನ ಬಡವರ ಹೆಸರಿನಲ್ಲಿ ಗಾಂಧೀಜಿಯವರ ಹೆಸರಿನಲ್ಲಿ ನಾನಾ ಉದ್ದೇಶಗಳಿಗಾಗಿ ಹಣವನ್ನು ತೆಗೆದುಕೊಂಡಿರುವುದು ತಮಗೆ ಗೊತ್ತಿದೆ. ಇದರಲ್ಲಿ ಎಷ್ಟು ಹಣ ವಾಪಸ್ಸು ಬಂದಿದೆ. ಇದರಲ್ಲಿ ಎಷ್ಟು ಹಣ ಸದುಪಯೋಗವಾಗಿದೆ, ಎಷ್ಟು ಹಣದುರುಪಯೋಗವಾಗಿದೆ ಎನ್ನುವ ಬಗ್ಗೆ ತನಿಖೆ ನಡೆಸಬೇಕು. ಈ ತಕ್ಷಣ ಈಗಿರತಕ್ಕ ಖಾದಿ ಮಂಡಲಿಯನ್ನು ರದ್ದು ಮಾಡಿ ಅದರ ಬಗ್ಗೆ ಅಮೂಲಗ್ರವಾಗಿ ತನಿಖೆ ನಡೆಸಬೇಕು. ಮತ್ತು ಹೊಸ ಮಂಡಲಿಯನ್ನು ರಚನೆ ಮಾಡಿ ಅದಕ್ಕೆ ಜೀವಕಳೆಯನ್ನು ಕೊಟ್ಟು ನಿಜವಾದ ಗುರಿಯನ್ನು ಸಾಧಿಸುವುದಕ್ಕೆ ಸಹಾಯಕವಾಗುವ ಹಾಗೆ ಅದನ್ನು ನಡೆಸಬೇಕು ಎಂದು ಅದರ ಬಗ್ಗೆ ಒಂದು ನಿಲುವನ್ನು ತಾಳಬೇಕು ಎಂದು ನಾನು ಆಗ್ರಹಪೂರ್ವಕವಾಗಿ ಕೇಳಿಕೊಂಡು ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾರ್ಯ ಸಭಾಧ್ಯಕ್ಷರೇ ಖಾದಿಬೋರ್ಡಿನ ವ್ಯವಹಾರವನ್ನು ನೆನೆಸಿಕೊಂಡ ಕೂಡಲೇ ನಮ್ಮ ಮನಸ್ಸಿಗೆ ಬರತಕ್ಕ ಚಿತ್ರ ಒಂದು ಕರಾಳಚಿತ್ರದೋಪಾದಿಯಲ್ಲಿ ಇದೆಯೆಂದರೆ ತಪ್ಪಾಗುವುದಿಲ್ಲ. ಖಾದಿ ಕೈಗಾರಿಕೆಗಳನ್ನು ನಮ್ಮ ದೇಶದಲ್ಲಿ ಬೆಳೆಸುವಾಗ ಅದರಲ್ಲಿ ಇದ್ದಂತಹ ರಾಷ್ಟ್ರ, ಪೂಜ್ಯತೆ, ಅದರ ಉದ್ದೇಶ ಎಲ್ಲವೂ ಕೂಡ ಈಗ ಎಲ್ಲಿ ಮಾಯವಾದವೋ ಏನೋ ಎನ್ನುವ ಒಂದು ಪರಿಸ್ಥಿತಿ ಬಂದಿದೆ. ಖಾದಿ ಕೈಗಾರಿಕೆಗಳ ಬೆಳವಣಿಗೆಯ ಜೊತೆಗೆ ರಾಜಕೀಯ ಗೊಂದಲಗಳನ್ನು ಬೆಳೆಸಿ ಈ ಒಂದು ಕೈಗಾರಿಕೆಯು ಈ ಸ್ಥಿತಿಗೆ ಬಂದಿದೆ ಎಂದೇ ನಾನು ಅಂದುಕೊಂಡಿದ್ದೇನೆ. ಕೇಂದ್ರದ ಖಾದಿ ಕಮಿಷನ್ ಸಂಸ್ಥಾನದಲ್ಲಿರತಕ್ಕಂಥಾ ಖಾದಿ ಬೋರ್ಡುಗಳಿಗೆ ಕೊಟ್ಟಂತಹ ಧನ ಸಹಾಯ ಎಲ್ಲಿ ಹೋಯಿತು ? ಮತ್ತು ಖಾದಿ ಬೆಳವಣಿಗೆಯಿಂದ

ದೇಶಕ್ಕೆ ಆಗಿರತಕ್ಕಂಥಾ ಲಾಭವೆಲ್ಲಿ ಹೋಯ್ತು ? ಈ ಕೈಗಾರಿಕೆಗೆ ಇದ್ದಂತಹ ಒಂದು ಪವಿತ್ರವಾದ ಹೆಸರು ಈಗ ವಿಷಯವಾಗುವುದಕ್ಕೆ ಕಾರಣವೇನು ? ಇವನ್ನು ಪರಿಶೀಲನೆ ಮಾಡಿ ನೋಡಿದರೆ ಮನಸ್ಸಿಗೆ ನೋವುಂಟಾಗುತ್ತದೆ. ದೇವರ ಪೂಜೆಯನ್ನು ಮಾಡುವ ಜನ ದೇವರನ್ನು ಕದಿಯುವ ಕಾಲ ಬಂದಿರುವಾಗ ಖಾದಿಯ ಗತಿ ಇನ್ನೇನು ಎನ್ನುವ ಭಾವನೆ ಬಂದಿದೆ. ಹಿಂದೆ ಖಾದಿ ಬೋರ್ಡಿನ ಅಧ್ಯಕ್ಷರಾಗಿದ್ದವರು ಒಬ್ಬರು ಒಂದು ದಿವಸ ಖಾದಿ ಬೋರ್ಡಿನಲ್ಲಿ ಏನೇನು ಅವ್ಯವಹಾರಗಳು ನಡೆದಿವೆ ಎಂದು ನೋಡುವುದಕ್ಕೆ ಹೋದಾಗ ಅಲ್ಲಿ 'ಎ' ಎನ್ನುವುದನ್ನು ಹಿಡಿಯುವುದಕ್ಕೆ ಹೋದಾಗ 'ಬಿ' ಎನ್ನುವುದನು ಸಿಕ್ಕಿದ. ಆದರೆ ಅವನು 'ಸಿ' ಆಗಿದ್ದ ಎನ್ನುವಂತಹ ಪರಿಸ್ಥಿತಿ ಉಂಟಾಯಿತು. ಅಂದರೆ ಯಾರೋ ಅನಾಮಧೇಯರನ್ನು ಖಾದಿ ಬೋರ್ಡಿನಲ್ಲಿ 'ಘೋಸ್ಟ್' ಗೋನ್ಸ್‌ರ ನೇರಿಸಿಕೊಂಡಿದ್ದರು. ಖಾದಿ ಬೋರ್ಡಿನಲ್ಲಿ ಏನೇನು ಅವ್ಯವಹಾರ ನಡೆದಿದೆ ಎಂದು ಪತ್ತೆ ಹಚ್ಚಿಗೋನ್ಸ್‌ರ ಯಾರು ಯಾರನ್ನೋ ಹಿಡಿಯಲು ಬಲೆ ಹಾಕಿ ಹಿಡಿಯುವುದಕ್ಕೆ ಹೋದಾಗ ಅವರು ಪರ್ಯವಸಾನವಾದರು. ಆ ರೀತಿ ಬಲೆ ಹಾಕಿ ಹಿಡಿದಾಗ ಸಿಕ್ಕಿದ ಮನುಷ್ಯ ಬೇರೆಯವನಾಗಿದ್ದರೆ, ಅವನನ್ನು ಕೈಬಿಟ್ಟ ಪ್ರಸಂಗ ನನ್ನ ಜ್ಞಾಪಕದಲ್ಲಿ ಇದೆ. ಈ ರೀತಿಯ ರಾಜಕೀಯ ಗೊಂದಲಗಳನ್ನು ಬೆಳೆಯುತ್ತಿರುವ ಕೈಗಾರಿಕೆಗಳ ಮೇಲೆ ಹೇರುವುದಾದರೆ ಅದು ತಪ್ಪಾಗುತ್ತದೆ ಅಲ್ಲದೆ ಅದು ಒಂದು ಮಹಾ ಪಾಪ ಎಂದು ಹೇಳುತ್ತೇನೆ. ನಮ್ಮ ದೇಶದ ಬೆಳವಣಿಗೆಗೆ ಮತ್ತು ಪ್ರಗತಿಗೆ, ಇಡೀ ರಚನಾತ್ಮಕವಾದ ಕಾರ್ಯಗಳಲ್ಲಿ ಒಗ್ಗಟ್ಟನ್ನು ಬೆಳೆಸುವುದಕ್ಕೆ ಈ ಖಾದಿ ಕೈಗಾರಿಕೆ ಬಹಳ ಮುಖ್ಯ ವಾದುದು ಎಂದು ಮಹಾತ್ಮ ಗಾಂಧೀಜಿಯವರು ಹೇಳಿದ್ದರು. ಈ ಖಾದಿಯನ್ನು ಧಾರಣೆ ಮಾಡುವುದರಲ್ಲಿ ಮೂರು ಬಹು ಮುಖ್ಯವಾದ ಗುಣಗಳು ಇವೆ. ಮೊದಲನೆಯದಾಗಿ ಹೇಳುವುದಾದರೆ, ಹೊರದೇಶಗಳಿಂದ ಬಟ್ಟೆಗಳನ್ನು ತರಿಸುವುದನ್ನು ನಿಲ್ಲಿಸಿ, ಚರಕದ ಸಹಾಯದಿಂದ ನಮ್ಮ ದೇಶದಲ್ಲಿಯೇ ಬಟ್ಟೆಗಳನ್ನು ನೇಯುವುದಕ್ಕೆ ಪ್ರಯತ್ನ ಮಾಡಿದರೆ, ಅದರಿಂದ ಹೊರದೇಶಗಳಿಗೆ ಹೋಗುವ ಹಣವನ್ನು ಉಳಿಸಬಹುದಲ್ಲದೆ, ನಮ್ಮ ದೇಶದ ಹೆಚ್ಚಿನ ಜನರಿಗೆ ಉದ್ಯೋಗಗಳನ್ನು ದೊರಕಿಸಿಕೊಟ್ಟಂತಾಗುತ್ತದೆ. ಎರಡನೆಯದಾಗಿ ಈ ಖಾದಿಯನ್ನು ಧರಿಸುವುದರಿಂದ ಸಾರ್ವಜನಿಕರ ಮನಸ್ಸಿನಲ್ಲಿ ಒಂದು ಒಳ್ಳೆಯ ಭಾವನೆ ಉಂಟಾಗುವ ಕಾಲ ಇತ್ತು. ಆದರೆ ಅದು ಇತ್ತೀಚೆಗೆ ಕೊಂಚ ಮಟ್ಟಿಗೆ ಕಡಿಮೆ ಯಾಗುತ್ತಿದೆ. ಇದಕ್ಕೆ ಕಾರಣ ಖಾದಿ ಧರಿಸಿದ ಜನರು ಯಾವ ಸಿದ್ಧಾಂತ ಗಳನ್ನು ಉಪಯೋಗಿಸಿ ಸ್ವೀಕರಿಸಿಕೊಂಡರೋ ಆ ಸಿದ್ಧಾಂತಗಳನ್ನು ಇಂದಿನವರು ಅನುಸರಿಸದಿರು ವುದು. ಖಾದಿ, ಕಾಫಿ ಮತ್ತು ಕಾರ್ಕಿ ಈ ಬಟ್ಟೆಗಳ ಹಿಂದೆ ತ್ಯಾಗ, ಪವಿತ್ರತೆ ಮತ್ತು ಅಧಿಕಾರ ಇದೆ. ಕತ್ತೆಯು ಹುಲಿಯ ವೇಷವನ್ನು ಧರಿಸಿದಂತೆ, ಈ ಬಟ್ಟೆಗಳನ್ನು ಧರಿಸಿದ ಜನರು ಕೆಟ್ಟ ಕೆಲಸ ಮಾಡುತ್ತಾರೆಂಬುದು ಸಾರ್ವಜನಿಕರಿಗೆ ತಿಳಿದು ಬಂದ ಮೇಲೆ ಈ ಬಟ್ಟೆಗಳಿಗಿದ್ದ ಪವಿತ್ರತೆಯೂ ಸಹ ಹೊರಟುಹೋಯಿತು. ಆದರೂ ಸಹ ಈ ಖಾದಿಯ ಮೇಲೆ ಅನೇಕರಿಗೆ ಒಳ್ಳೆಯ ಭಾವನೆ ಈಗಲೂ ಇದೆ, ಮುಂದೆಯೂ ಸಹ ಇರುತ್ತದೆ. ನಮಗೆ ಸ್ವರಾಜ್ಯ ಬಂದ ಮೇಲೆ ಖಾದಿ ಕೈಗಾರಿಕೆ ಯನ್ನು ಬೆಳೆಸುವ ಕೆಲಸವನ್ನು ಕೇಂದ್ರ ಸರ್ಕಾರದವರು ಮತ್ತು ರಾಜ್ಯಸರ್ಕಾರದವರು ಮಹಿಸಿ ಕೊಂಡಿದ್ದರು. ಕೇಂದ್ರ ಸರ್ಕಾರದಲ್ಲಿ ಖಾದಿ ಕಮಿಷನ್ ಮತ್ತು ರಾಜ್ಯಸರ್ಕಾರಗಳಲ್ಲಿ ಖಾದಿ ಬೋರ್ಡ್‌ಗಳು ಎಂದು ರಚನೆ ಮಾಡಿ ಇದನ್ನು ಬೆಳೆಸುತ್ತಾ ಬಂದರು. ಮೊದಮೊದಲು ಈ ಖಾದಿ ಬೋರ್ಡ್‌ಗಳಲ್ಲಿ ಹಣವನ್ನು ಸ್ವಾಹ ಮಾಡುವುದರಲ್ಲಿ ಪಳಗಿದ ಜನರು ಇರಲಿಲ್ಲ. ಮುಂದೆ ಕೆಲವು ಬುದ್ಧಿವಂತರಾದ ಜನರು ಇದರಲ್ಲಿ ಸೇರಿಕೊಂಡು ಇದರಲ್ಲದ್ದಂಥ ತತ್ವಗಳನ್ನು ನೂರೆ ಮಾಡಿ, ದೋಚ್ಕು ದೇವರ ಹತ್ತಿರ ಇದ್ದರೇನು, ಸರ್ಕಾರದ ಹತ್ತಿರ ಇದ್ದರೇನು ತಮ್ಮ ಹತ್ತಿರ ಇದ್ದರೇನು ಎಂದು ತಿಳಿದುಕೊಂಡು, ಅದರಂತೆ ನಡೆದುಕೊಂಡಿದ್ದರಿಂದ ಈ ಖಾದಿ ಬೋರ್ಡ್‌ಗಳಿಗೆ ಅಪಾಯ ಸಂಭವಿಸಿತು. ಈ ರೀತಿಅಪಾಯ ಸಂಭವಿಸಿದ್ದರಿಂದ ದೇಶದ ಜನರು ಮತ್ತು ಸರ್ಕಾರದವರು ಮರುಗುವಂತಾಯಿತು. ಈ ರೀತಿ ಅಪಾಯ ಸಂಭವಿಸುವುದಕ್ಕೆ ಪ್ರೋತ್ಸಾಹ ಕೊಟ್ಟ ಸರ್ಕಾರಕ್ಕೆ ಮತ್ತು ಪಾನ ನಿರೋಧದ ಬಗ್ಗೆ ನಿರ್ಲಕ್ಷದಿಂದ ಇರುವ ಸರ್ಕಾರಕ್ಕೆ ಏಳಿಗೆ ಕಮ್ಮಿ ಅಂತಹ ಸರ್ಕಾರಕ್ಕೆ ರಾಜ್ಯಭಾರ ಮಾಡುವುದಕ್ಕೆ ಅಡಿಪಾಯ ಕಡಿಮೆ ಇರುತ್ತದೆಂದು ತಿಳಿದವರು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ತಯಾರಾದಂಥ ಖಾದಿ ಇಂದಿನ ದಿವಸ ಮದ್ರಾಸ್ ರಾಜ್ಯದಲ್ಲಾಗಲಿ, ಮುಂಬೈ ರಾಜ್ಯದಲ್ಲಾಗಲಿ, ದೆಹಲಿಯಲ್ಲಾಗಲೀ ಇಲ್ಲ. ಎಂದು ಎಲ್ಲೆಲ್ಲಿ ನೋಡಿದರೂ ಕೂಡ ಹೆಕ್ಸ್ ಖಾದಿ, ಆಂಧ್ರ ಖಾದಿ, ಗುಜರಾತ್ ಖಾದಿ ಬಟ್ಟೆಗಳು ಕಂಡು ಬರುತ್ತವೆ. ಇದನ್ನು ನೋಡಿದಾಗ ನಮ್ಮ ರಾಜ್ಯದಲ್ಲಿ ಕ್ರಮೇಣ ಈ ಖಾದಿ ಕೈಗಾರಿಕೆ ಎಂಬುದು ನಶಿಸಿ ಹೋಗುತ್ತದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಖಾದಿ ಬಟ್ಟೆಗಳಿಗೆ ನಮ್ಮ ರಾಜ್ಯದಲ್ಲಿ ಒಂದು ಒಳ್ಳೆಯ ವಾತಾವರಣವೇ ಇಲ್ಲವೇನೋ ಎಂದು ಕಂಡು ಬರುತ್ತಿದೆ. ನಾನು 1952ರಲ್ಲಿ ಈ ಮನೆಯ ಸದಸ್ಯನಾಗಿದ್ದಾಗ ಈ ಸಭೆಯಲ್ಲಿ ಬರಿ ತಲೆಯಲ್ಲಿ ರುವವರು ಹುಡುಕಿದರೂ ಸಿಗುತ್ತಿರಲಿಲ್ಲ. ಅಂದರೆ ಎಲ್ಲರೂ ಖಾದಿ ಜೋಪಿಗಳನ್ನು ಹಾಕಿರುತ್ತಿ

(ಶ್ರೀ ಕೆ. ಪ್ರಭಾಕರ್)

ದ್ದರು. ಆದರೆ ಇಂದು ಜೋಪಿ ಹಾಕತಕ್ಕಂಥ ಸದಸ್ಯರು ನಾಲ್ಕೈದು ಮಂದಿ ಮಾತ್ರ ಇದ್ದಾರೆ. ಮಾನ್ಯ ಸದಸ್ಯರು ಇಂದು ಖಾದಿ ಧಾರಣೆ ಮಾಡುವುದನ್ನು ಸಹ ಬಿಟ್ಟುಬಿಟ್ಟಿದ್ದಾರೆ. ಜೋಪಿ ಹಾಕಿಕೊಳ್ಳದಿದ್ದರೆ ಹೋಗಲಿ, ಜನರಿಗೆ ಜೋಪಿ ಹಾಕದಿದ್ದರೆ ಒಳ್ಳೆಯದು. ಖಾದಿಯನ್ನು ಎಲ್ಲರೂ ಧರಿಸಿದರೆ ಅದರಿಂದ ರಾಷ್ಟ್ರದಲ್ಲಿರುವ ಬಡಜನರಿಗೆ ಉಪಕಾರ ಮಾಡಿದಂತಾಗುತ್ತದೆ. ಖಾದಿ ಕೈಗಾರಿಕೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಆದರೆ ಯಾರೂ ಧರಿಸುತ್ತಿಲ್ಲ. ಮಿಲ್‌ಗಳಲ್ಲಿ ಕೆಲಸ ಮಾಡುವ ಜನರು ಸಹ ಇಂದು ಖಾದಿಯನ್ನು ಧರಿಸುತ್ತಿಲ್ಲ. ಇದರ ಅರ್ಥವೆಂದರೆ ಖಾದಿಯ ಬಗ್ಗೆ ತಾತ್ಸಾರ ಇರುವುದು. ಈ ಒಂದು ದುಸ್ಥಿತಿ ಖಾದಿ ಕೈಗಾರಿಕೆಗೆ ಬಂದಿರುವುದು ದುರ್ದೈವವೆಂದು ಹೇಳಬಹುದು. ಖಾದಿ ಕೈಗಾರಿಕೆಯನ್ನು ಪ್ರಬಲವಾಗಿ ಬೆಳೆಸಿದ್ದೇ ಆದರೆ, ಅದರಿಂದ ನಿರುದ್ಯೋಗವನ್ನು ಕಡಿಮೆ ಮಾಡಬಹುದು. ಇದರಿಂದ ದೇಶಕ್ಕೂ ಒಳ್ಳೆಯದಾಗುತ್ತದೆಂಬ ಮಾತು ನಿರ್ವಿವಾದದ ವಿಚಾರ. ಇದನ್ನು ಮಾನ್ಯ ಕೈಗಾರಿಕಾ ಸಚಿವರು ಅರಿತುಕೊಳ್ಳಬೇಕು. ವಯಸ್ಸಾದವರಿಗೆ ದೇಶಕ್ಕಾಗಿ ಒಳ್ಳೆಒಳ್ಳೆಯ ಕೆಲಸಗಳನ್ನು ಮಾಡಬೇಕೆಂಬ ಆಶೆ ಯಾವ ರೀತಿ ಇರುತ್ತದೋ, ಅದಕ್ಕಿಂತ ಹೆಚ್ಚಿನ ಆಶೆ ಮಾನ್ಯ ಕೈಗಾರಿಕಾ ಸಚಿವರಿಗೂ ಸಹ ಅವರ ವಯಸ್ಸು ಚಿಕ್ಕದಾಗಿದ್ದರೂ ಸಹ ಇದೆ. ಇಂತಹ ಒಂದು ಸಂದರ್ಭದಲ್ಲಿ ಅವರು ಈ ಖಾದಿ ಕೈಗಾರಿಕೆಯನ್ನು ಬೆಳೆಸಬೇಕು, ಉಳಿಸಬೇಕೆಂಬ ಸದುದ್ದೇಶದಿಂದ ಹೊರಟಿರುವುದು ಸಂತೋಷಪಡಬೇಕಾದ ಸಂಗತಿ ಎಂದು ಹೇಳಬಹುದು. ಖಾದಿ ಕಮಿಷನ್ ಅವರಿಂದ ಬಂದಿರುವ ಆದೇಶದಂತೆ ನಡೆದುಕೊಳ್ಳುತ್ತಿರುವುದು ಪವಿತ್ರವಾದ ಕಾರ್ಯವೆಂದು ಹೇಳಬಹುದು. ಕೆಲವು ಸಲ ಕೋರ್ಟ್‌ಗಳಿಂದ ಇದೇ ರೀತಿ ನಡೆದುಕೊಳ್ಳಬೇಕೆಂದು ಡೈರೆಕ್ಷನ್ ಬಂದರೂ ಸಹ, ಕಂದೂ ಕಾರಣದಂತೆ ಏನೋ ಒಂದು ಕಾರಣ ಒಡ್ಡಿ ಕೋರ್ಟಿನ ಹೇಳಿಕೆಯಂತೆ ನಡೆದುಕೊಳ್ಳದಿದ್ದರೂ ಸಹ, ಈ ಖಾದಿ ಬೋರ್ಡಿನ ವಿಚಾರದಲ್ಲಿ ಮಾತ್ರ ಆ ರೀತಿ ನಮ್ಮನ್ನಿರುವುದು ಸರಿಯಲ್ಲ. ಇದಕ್ಕೆ ಒಂದು ಅಷ್ಟಬಂಧನವನ್ನಾದರೂ ಹಾಕಿ ಈಗಿರುವ ನ್ಯೂನತೆಗಳನ್ನು ಹೋಗರಾಡಿನಬೇಕು. ಒಡಕಿನ ಪಾತ್ರೆಯಲ್ಲಿರುವ ಜೇನುತುಪ್ಪ ಸೋರಿಹೋಗದಂತೆ ಮೇಣ ಮೆತ್ತಿ ಮುಚ್ಚುವ ಕೆಲಸ ಮೊದಲು ಮಾಡಬೇಕಾಗಿದೆ. ಖಾದಿ ಬೋರ್ಡ್ ಬಗ್ಗೆ ಈಗ ಸರ್ಕಾರಕ್ಕೆ ಒಳ್ಳೆಯ ಸದ್ಭಾವನೆ ಬಂದಿದೆ ಎಂಬುವ ಮಾತು ಎಳ್ಳಷ್ಟು ಸುಳ್ಳಲ್ಲ. ಈ ಖಾದಿ ಬೋರ್ಡ್ ಇನ್ನು ಮುಂದೆ ಸುಯೋಗಿ ಕೆಲಸ ಮಾಡುವ ಬಗ್ಗೆ ಕೆಲವು ಸುಧಾರಣೆಗಳನ್ನು ಖಾದಿ ಕಮಿಷನ್ ಅವರ ಆದೇಶದಂತೆ ಮಾಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಿದ್ದಾರೆ. ಕೇಂದ್ರ ಸರ್ಕಾರ ಖಾದಿ ಕಮಿಷನ್ನಿನಿಂದ ನಮ್ಮ ಖಾದಿ ಬೋರ್ಡಿಗೆ ಕೋಟ್ಯಾಂತರ ರೂಪಾಯಿಗಳು ಬಂದರೆ, ಅದರ ಆಗುಹೋಗುಗಳನ್ನು ಗೊತ್ತು ಮಾಡವುದು ಈಗಿನ ಪದ್ಧತಿಯಿಂದ ಕಷ್ಟ ಎಂದು ನಾವು ತಿಳಿದಿದ್ದೇವೆ. ಈ ಒಂದು ತಂಕೆಗೆ ಕಾರಣವೆಂದರೆ, ಯಾರು ಈ ಖಾದಿ ಬೋರ್ಡಿನಿಂದ ಹಣವನ್ನು ಸಾಲವಾಗಿ ಪಡೆಯುತ್ತಾರೋ ಅದನ್ನು ವಾಪಸ್ ಕೊಡುವ ಮನೋಧರ್ಮ ಇಲ್ಲವಾಗಿರುವುದು. ಈಗಿನ ರೀತಿಯಿಂದ ಈ ಖಾದಿ ಬೋರ್ಡ್ ಉದ್ಧಾರವಾಗುವ ಕೂಸಾಗಿಲ್ಲ. ಆದ್ದರಿಂದ ಇದನ್ನು ಇಲ್ಲದ ಹಾಗೆ ಮಾಡಿ, ಅದೇ ಜಾಗದಲ್ಲಿ ಮತ್ತೆ ಒಂದು ಹೊಸ ಖಾದಿ ಬೋರ್ಡನ್ನು ರಚನೆ ಮಾಡಿ, ಅದಕ್ಕೆ ಕೆಲವು ಅಧಿಕಾರಿಗಳನ್ನು ನೇಮಕ ಮಾಡುವುದರಿಂದ ಅದಕ್ಕೆ ಒಂದು ಕಾನೂನಿನ ಬಲ ಮತ್ತು ರಕ್ಷಣೆ ಕೊಟ್ಟಂತಾಗುತ್ತದೆ. ಮತ್ತು ವರ್ಷಕ್ಕೆ ಒಮ್ಮೆ ಅದರ ಆಗುಹೋಗುಗಳು ಏನಾಗಿವೆ ಎನ್ನುವ ಬಗ್ಗೆ ಲೆಕ್ಕವನ್ನು ಪರಿಶೀಲನೆ ಮಾಡುವುದಕ್ಕೆ ಕೆಲವು ಅಧಿಕಾರಿಗಳ ನೇಮಕವನ್ನು ಈ ಬೋರ್ಡಿಗೆ ಕೊಡುವುದರ ಮೂಲಕ, ವರ್ಷಕ್ಕೊಮ್ಮೆ ಅದರ ಲೆಕ್ಕಪತ್ರಗಳು ಈ ಶಾಸನಸಭೆಯ ಮುಂದೆ ಬಂದು, ಅದನ್ನು ತಿದ್ದುಪಡಿ ಮಾಡುವುದಕ್ಕೆ ಅವಕಾಶ ಇರುವಂತೆ ಮಾಡುತ್ತಿರುವುದು ಸರಿಯಾಗಿದೆ ಎಂದು ನಾನು ಅಂದುಕೊಂಡಿದ್ದೇನೆ.

5-30 P.M.

ಆದರೆ ಇದರಲ್ಲಿ ಇನ್ನೊಂದು ನ್ಯೂನತೆ ಏನಿದೆ ಎಂದರೆ ನಮ್ಮ ದೇಶದ ಯಾವ ಯಾವ ಭಾಗದಲ್ಲಿ ಹತ್ತಿ ಬೆಳೆಯುತ್ತಿದ್ದಾರೆ ಮತ್ತು ಆ ಹತ್ತಿಯಿಂದ ನೂಲನ್ನು ತೆಗೆಯುವವರಿಗೆ ಪ್ರೋತ್ಸಾಹ ಕೊಟ್ಟು ಈ ಮಂಡಲಿಗೆ ಸಾಕಷ್ಟು ಹತ್ತಿಯನ್ನು ದೊರಕುವಂತೆ ಇದರಲ್ಲಿ ಅವಕಾಶ ಮಾಡಿಕೊಂಡಿಲ್ಲ. ಇದರ ಜೊತೆಗೆ, ಮೊನ್ನೆ ತಾನೇ ರಾಷ್ಟ್ರಮಟ್ಟದಲ್ಲಿ ಖಾದಿ ಕೈಗಾರಿಕೆಯಲ್ಲಿ ನಿರತರಾಗಿರುವವರ ಕುಟುಂಬದ ಪರಿಸ್ಥಿತಿಯನ್ನು ಕಂಡುಕೊಂಡು ಖಾದಿ ವೀವಿಂಗ್ ಫ್ಯಾಮಿಲೀಸ್‌ಗಳಿಗಾಗಿ ಸಹಾಯ ಮಾಡಬೇಕೆಂದು ದೇಶದಾದ್ಯಂತ ಸುಮಾರು ಒಂದು ಲಕ್ಷ ಖಾದಿ ನೇಯ್ಗೆ ಮಾಡುವ ಕುಟುಂಬಗಳಿಗಾಗಿ ಸಹಾಯ ಮಾಡಬೇಕೆಂದು ಇದನ್ನು ವಿಸ್ತರಣೆ ಮಾಡಿದ್ದಾರೆ. ಇದರ ಮೂಲಕ ನಾವು

ವನ್ನು ಕೊಟ್ಟು ಹೆಚ್ಚು ನೂಲನ್ನು ಪಡೆದು ಈ ಖಾದಿ ಉದ್ಯಮವನ್ನು ಮುಂದಕ್ಕೆ ತರಲು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಇದೂ ಒಂದು ಬೇಸಿಕ್ ಇಂಡಸ್ಟ್ರಿ ಎಂದು ಇದನ್ನು ರಚನಾತ್ಮಕ ವಾಗಿ ಮುಂದಕ್ಕೆ ತರಬೇಕೆಂದು ಮಾಡುತ್ತಿದ್ದಾರೆ. ಇದು ನಿಜವಾಗಿಯೂ ದೇಶಕ್ಕೆ ಒಳ್ಳೆಯದು ಮಾಡುತ್ತದೆ ಮತ್ತು ಸರಕಾರ ಇದು ಅವರ ಕರ್ತವ್ಯ ಎಂದು ಮಾಡುತ್ತಿದೆ ಮತ್ತು ರಾಷ್ಟ್ರಮಟ್ಟದಲ್ಲೂ ಕೂಡ ಖಾದಿಯನ್ನು ಹೆಚ್ಚು ಜನಪ್ರಿಯವಾಗಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ಖಾದಿ ಕಮಿಷನ್‌ನವರೂ ಹೆಚ್ಚು ಬೆಂಬಲ ಹಾಗೂ ಸಹಕಾರಗಳನ್ನು ಕೊಡುತ್ತಿದ್ದಾರೆ ಮತ್ತು ಇದು ಬಹಳ ಒಳ್ಳೆಯ ವಿಷಯ ಮತ್ತು ಖಾದಿಯನ್ನು ಇನ್ನು ಹೆಚ್ಚಾಗಿ ಜನಪ್ರಿಯವಾಗಿ ಮಾಡಬೇಕೆಂದು ಹೇಳುತ್ತಿದ್ದೇನೆ. ಅದರಂತೆ ಸರಕಾರ ತಕ್ಕ ಕ್ರಮ ತೆಗೆದ ಕೊಳ್ಳುತ್ತಾರೆಂದು ನಾನು ನಂಬಿಕೊಳ್ಳುತ್ತೇನೆ. ಖಾದಿ ಕೈಗಾರಿಕೆಯಲ್ಲಿ ಸಹಕಾರ ಇಲಾಖೆಯಂತೆ ಆಗಬಾರದು. ಸಹಕಾರ ಇಲಾಖೆಯಲ್ಲಿ ಅನೇಕ ಸಹಕಾರ ಸಂಘಗಳು ಆಗಿ ಈಗ ಎಷ್ಟೊ ಸೊಸೈಟಿಗಳ ಕಾರ್ಯ ಕುಂಠಿತವಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಖಾದಿಯನ್ನು ಸಹಕಾರ ಮಾರ್ಗದಲ್ಲಿ ಮಾಡಬೇಕು ಎನ್ನುತಕ್ಕದ್ದು ಅದು ಎಷ್ಟುಮಟ್ಟಿಗೆ ಆಗುತ್ತೋ ನೋಡಬೇಕಾಗಿದೆ. ಇದು ಹೇಗಿದೆ ಎಂದರೆ ಜಾರುವ ನೆಲದ ಮೇಲೆ ಜಾರುವ ಬೂಡ್ಸನ್ನು ಹಾಕಿಕೊಂಡು ನಡೆಯಲು ಹೋದರೆ ಅಂತಹವರ ಹಲ್ಲುಗಳ ಗತಿಯೇನು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಆದುದರಿಂದ ಖಾದಿಯನ್ನು ಅಭಿವೃದ್ಧಿ ಮಾಡಬೇಕೆಂದಿರುವಾಗ ಖಾದಿ ಸೊಸೈಟಿಗಳೆಂದು ಮಾಡಿ ಸಹಕಾರ ಸಂಘಗಳಂತೆ ಮಾಡುವುದು ಇಲ್ಲಿ ಬೇಡ, ಇಂತಹ ಸೊಸೈಟಿಯಿಂದ ಖಾದಿಯನ್ನು ಉದ್ಧಾರ ಮಾಡುವುದ ಕ್ಕಾಗುವುದಿಲ್ಲ ಖಾದಿಯು ಕಾರ್ಯ ಬಹಳ ಪವಿತ್ರವಾದುದು. ಇದರ ಪವಿತ್ರತೆಯನ್ನು ಕಾಪಾಡುವುದು ನಮೆಲ್ಲರ ಕರ್ತವ್ಯ. ಆದರೆ ಇದರೊಳಗೆ ಖಾದಿಯ ಪವಿತ್ರತೆಗೆ ಧಕ್ಕೆ ಬರುವಂತೆ ಕೆಲಸ ಮಾಡುವವರಿಗೆ ಇದರಲ್ಲಿ ಕಾಲಿಡದಂತೆ ಮಾಡಬೇಕು. ಇದಕ್ಕಾಗಿ ಸರಕಾರ ಸರಿಯಾದ ರೀತಿಯಲ್ಲಿ ಪ್ರಚಾರಕ್ಕೆ ಅವಕಾಶ ಮಾಡಿಕೊಡಬೇಕು. ಇದನ್ನು ಸಿಸ್ಟಮ್ಯಾಟಿಕ್ ಆಗಿ ಮಾಡ ಬೇಕು. ಖಾದಿ ತತ್ವದಲ್ಲಿ ಪೂರ್ಣ ನಿಷ್ಠೆ ಇರುವವರನ್ನೂ ಕ್ರೋಢೀಕರಿಸಿ ರಾಷ್ಟ್ರಕ್ಕೆ ಅನ್ಯಾಯ ವಾಗದಂತೆ ಕೆಲಸಮಾಡುವವರನ್ನು ಇಲ್ಲಿ ನೇಮಿಸಬೇಕು ಮತ್ತು ಖಾದಿ ಉದ್ಯಮ ಚೆನ್ನಾಗಿ ಬೆಳೆಯಲು ತಕ್ಕ ವ್ಯವಸ್ಥೆ ಮಾಡಬೇಕು. ಇದಕ್ಕೆ ಸರಿಯಾದ ಪ್ರಚಾರಕರನ್ನು ವ್ಯವಸ್ಥೆ ಮಾಡಬೇಕು ಮತ್ತು ಇಲಾಖೆಯಲ್ಲಿ ಸರಿಯಾದ ಲೆಕ್ಕ ಪರಿಶೀಲನೆ ಮಾಡುವವರನ್ನು ಇಡಬೇಕು. ಈಗ ಸೊಸೈಟಿ ಗಳಲ್ಲಿ ಲೆಕ್ಕಗಳನ್ನು ಪರಿಶೀಲನೆ ಮಾಡಲು ಒಂದು ನಿಯಮ ಇದೆ. ಅದು ರಾಜ್ಯದಲ್ಲಿ ಒಂದು ಸಾಲಿನಲ್ಲಿ ಶೇಕಡಾ ಹತ್ತರಷ್ಟು, ಇಲ್ಲವೇ ಇಪ್ಪತ್ತರಷ್ಟು ಸೊಸೈಟಿಗಳನ್ನು ಅಡಿಟ್ ಮಾಡಿದರೆ ಸಾಕು ಎಂದು ಇದೆ. ಅದರಂತೆ ಈ ಖಾದಿ ಇಲಾಖೆಯಲ್ಲಿ ಆಗಬಾರದು. ಇಲ್ಲಿ ಪ್ರತಿ ವರ್ಷವೂ ಸರಿಯಾಗಿ ಆಡಿಟ್ ಆಗಲೇ ಬೇಕು, ಹಿಂದೆ ಟಿಪ್ಪುಸುಲ್ತಾನನ ಕಾಲದಲ್ಲಿ ಒಂದು ಸೊಸೈಟಿ ಯಾಗಿದ್ದು ಆ ಸೊಸೈಟಿಯ ಲೆಕ್ಕವೇ ತನಿಖೆಯಾಗಿರುವುದಿಲ್ಲ, ಇದಕ್ಕೆ ಕಾರಣ ಸರಕಾರದ ನಿಯಮದಂತೆ ಶೇಕಡಾ 20 ಅಥವಾ 30 ಸೊಸೈಟಿಗಳ ಆಡಿಟ್ ಮಾಡಿದರೆ ಸಾಕು ಎಂದು ಇರುವುದರಿಂದಾಗಿ ಇಂತಹ ಸೊಸೈಟಿಗಳು ತಪ್ಪಿಸಿಕೊಳ್ಳಲು ಅವಕಾಶವಾಗುತ್ತಿದೆ. ಇವರು ಕೂಡ ಆಡಿಟ್ ಆಗುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಯತ್ನ ಮಾಡುತ್ತಾರೆ, ಇಂತಹ ಕಳ್ಳ ಇಲಿ ಗಳನ್ನು ಹಿಡಿಯಲು ಆಗುವುದಿಲ್ಲ, ಇದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ಇಂತಹ ಸೊಸೈಟಿಗಳಲ್ಲಿ ಇರುವ ಹಳೇ ಇಲಿಗಳನ್ನು ಹಿಡಿಯಬೇಕು ಎಂದರೆ ಬಹು ಕಷ್ಟ. ಇದರ ಬಗ್ಗೆ ಬಹಳ ಎಚ್ಚರಿಕೆಯಿಂದಿರಬೇಕಾಗುತ್ತದೆ. ಆದುದರಿಂದ ನಮ್ಮ ಖಾದಿ ಉದ್ಯಮ ಬೆಳೆಸುವಾಗ ಇಂತಹ ತಪ್ಪುಗಳಿಗೆ ಅವಕಾಶವಾಗದಂತೆ ವರ್ಷ ವರ್ಷವೂ ಇದರ ಲೆಕ್ಕ ಗಳನ್ನು ಸರಿಯಾಗಿ ಆಡಿಟ್ ಮಾಡಿಸಬೇಕು ಮತ್ತು ಇದನ್ನು ಗೃಹ ಕೈಗಾರಿಕೆಯಾಗಿ ಅಭಿವೃದ್ಧಿ ಪಡಿಸಲು ಸರಕಾರ ಸೂಕ್ತವಾದ ಕ್ರಮಗಳನ್ನು ತೆಗೆದ ಕೊಂಡು ನೆಚ್ಚಿನ ಪ್ರೋತ್ಸಾಹ ಕೊಡಬೇಕು.

ಇದರಲ್ಲಿ ಇನ್ನೊಂದು ಏನಾಗಿದೆ ಎಂದರೆ ಹಚ್ಚಾಗಿ ಷೇರುಗಳನ್ನು ಪಡೆಯುತ್ತಿರುವುದು. ಹಿಂದಿನ ಸರಕಾರದಲ್ಲಿ ಷೇರುಗಳಿಗಾಗಿ ಹೆಚ್ಚು ಹಣ ಹಾಕಿ ಆ ನಂತರ ಅದನ್ನು ಖಾಸಗಿ ಜನರಿಗೆ ಪಹಿಸುವ ಒಂದು ಪದ್ಧತಿ ಬೆಳೆದು ಬಂದಿದೆ. ಇಂತಹ ಅವ್ಯವಹಾರಗಳಿಗೆ ಅವಕಾಶ ಕೊಡಬಾರದು. ಹಿಂದಿನ ಸರಕಾರ ಒಂದು ವರ್ಷ ಒಂದು ಕೈಗಾರಿಕೆಗಾಗಿ ಷೇರುಗಳನ್ನು ಹಾಕಿ ಅದನ್ನು ಚೆನ್ನಾಗಿ ಬೆಳೆಸಿ ಬರುವ ವರ್ಷ ಅದನ್ನು ಖಾಸಗಿ ಜನಕ್ಕೆ ಪಹಿಸುವ ಒಂದು ಕೆಟ್ಟ ಪದ್ಧತಿಯನ್ನು ತ್ಯಜಿಸ ಬೇಕು, ಹಿಂದಿನ ಸರಕಾರ ಇದನ್ನು ಮೊದಲು ಚೆನ್ನಾಗಿ ಮಾಡಬೇಕೆಂದು ಇದ್ದರೂ ಆ ನಂತರ ಚೆನ್ನಾಗಿ ಬೆಳೆಸಿ ಅದು ರಸಭರಿತವಾದ ಮೇಲೆ ಅವನ್ನು ಅವರ ಸಂಬಂಧಿಕರಿಗಾಗಿ ಪಹಿಸುವುದು ಸರಿಯಲ್ಲ. ಇದಕ್ಕಾಗಿ ಸರಕಾರದ ಬೊಕ್ಕಸವನ್ನು ಹಾಳುಮಾಡು ಸರಿಯಾದ ನೀತಿಯಲ್ಲ. ಹಿಂದಿನ ಸರಕಾರ ಇಂತಹ ವ್ಯವಹಾರ ಮಾಡುತ್ತಿದ್ದುದನ್ನು ಈಗಲಾದರೂ ಕೈಬಿಟ್ಟು ನಮ್ಮ ಖಾದಿ

(ಶ್ರಿ ಕೆ. ಪ್ರಭಾಕರ್)

ಉದ್ಯಮ ಬೆನ್ನಾಗಿ ಬೆಳೆಯಲು ಯತ್ನ ಮಾಡಬೇಕು, ನಮ್ಮ ಖಾದಿಯ ಬೆಳವಣಿಗೆಗೆ ಒಳ್ಳೆಯ ಭವಿಷ್ಯವಿದೆ ಮತ್ತು ಸಾಕಷ್ಟು ಪ್ರೋತ್ಸಾಹ ಕೊಟ್ಟು ಸ್ವದೇಶಿ ಬಟ್ಟೆ ಬೆಳೆಯಲು ಹೆಚ್ಚು ಅವಕಾಶ ಮಾಡಿಕೊಡಬೇಕು. ಖಾದಿಯ ಕೈಗಾರಿಕೆ ಒಂದು ಪವಿತ್ರವಾದ ಕೈಗಾರಿಕೆ ಎಂದು ಇದನ್ನು ರಸವತ್ತಾಗಿ ಮಾಡುವುದು ನಮ್ಮ ಸರಕಾರದ ಕರ್ತವ್ಯ. ಸಹಕಾರ ತತ್ವದ ಮೇಲೆ ಸರಕಾರ ಇದನ್ನು ಬೆಳೆಸುವಾಗ ಬಹಳ ಎಚ್ಚರಿಕೆಯಿಂದಿರಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ ಎಂದರೆ ಈಗಿರುವ ಬೋರ್ಡು ಬೇಡ. ಇದನ್ನು ಅಬಾಲಿಷ್ ಮಾಡ ಬೇಕೆಂದು ಹೊರಟಿದ್ದಾರೆಂದು ಕೇಳುತ್ತೇನೆ. ಇದು ಹೇಗಿದೆ ಎಂದರೆ 'ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯಲ್ಲ' 'ಎನ್ನುವಂತಾಗಿದೆ. ಇರುವ ಬೋರ್ಡ್‌ನ್ನು ತೆಗೆದು ಕೇಂದ್ರ ಸರಕಾರದ ಅಡೇಶದಂತೆ ಇದನ್ನು ಒಂದು ಕಮಿಷನ್ ಆಗಿ ಮಾಡಿ ಇರರಲ್ಲಿ ಷೇರುಗಳನ್ನು ಮಾರಲು ಕೊಟ್ಟು ಅದರಿಂದ ಬಂಡವಾಳ ಮಾಡಿಕೊಂಡು ಇದನ್ನು ಮುಂದಕ್ಕೆ ತರಬೇಕೆಂದು ಇದ್ದಾರೆ ಎಂದು ಕೇಳುತ್ತೇವೆ. ಇದರಲ್ಲಿ ಬೋರ್ಡು ಯಾವ ರೀತಿ ಇರುತ್ತದೆ, ಅರ್‌ಬಿಟ್ರೇಷನ್ ಬೋರ್ಡು ಯಾವ ರೀತಿ ಇರಬೇಕು, ಸಾಲ ಯಾರಿಗೆ ಕೊಡಬೇಕು ಎನ್ನುವ ವಿವರಗಳೆಲ್ಲಾ ಇವೆ. ಇದರಲ್ಲಿ ಇನ್ನೊಂದು ಏನಿದೆ ಎಂದರೆ ಸಾಲದ ಬಾಕಿಯನ್ನು ವಸೂಲು ಮಾಡುವಾಗ ಲ್ಯಾಂಡು ರೆವೆನ್ಯೂ ಬಾಕಿಯನ್ನು ಯಾವ ರೀತಿ ವಸೂಲು ಮಾಡುತ್ತಾರೋ ಆ ರೀತಿ ಈ ಸಂಸ್ಥೆಯಲ್ಲೂ ವಸೂಲು ಮಾಡಬೇಕೆಂದು ಮಾಡಿದ್ದಾರೆ. ಇದನ್ನು ಕಾರ್ಯಗತ ಮಾಡುವಾಗ ಏನಾಗುತ್ತದೆ ಎಂದರೆ ಇದರಲ್ಲಿ ಕಟ್ಟು ಜನರು ಸೇರಿಕೊಂಡು ತೊಂದರೆಗಳಾಗುತ್ತವೆ. ಇಲ್ಲಿ ಹೇಳಿರುವುದನ್ನು ನಾವು ಒಪ್ಪಿಕೊಳ್ಳಬಹುದಾದರೂ ಹಿಂದೆ ಇದ್ದ ಬೋರ್ಡನ್ನು ವಜಾ ಮಾಡಿ ಪುನಃ ಮತ್ತೆ ಬೇರೆ ಒಂದು ರೀತಿಯಾಗಿ ಕಮಿಷನ್ ಮಾಡಿದರೆ ಅದರ ಮೂಲಕ ಷೇರು ಬಂಡವಾಳ ಮಾಡಿಕೊಂಡು ಕೆಲಸ ಮಾಡಿದರೆ ಅದರಿಂದ ಏನು ಹೆಚ್ಚು ಅನುಕೂಲವಾಗುತ್ತದೆ ಅದನ್ನು ವಿಚಾರ ಮಾಡಬೇಕಾಗಿದೆ. ಹಿಂದೆ ಇದ್ದ ಬೋರ್ಡೇ ಸಾಕಾಗಿತ್ತು. ಆದರೆ ಇದರಲ್ಲಿ ಇನ್ನೊಂದು ಏನು ಇದೆ ಒಂದು ಬೋರ್ಡು ವಜಾ ಆದಾಗ ಅದರ ಲಯಬಲಟಿಗಳನ್ನೂ ಕೂಡ ಇದರ ಜೊತೆಯಲ್ಲೇ ತೆಗೆದುಕೊಳ್ಳಬೇಕು ಎಂದರೆ ಹಿಂದಿನ ಬೋರ್ಡಿನಲ್ಲಿ ಇದ್ದ ಮುರುಕಲು ಕುರ್ಚಿಗಳು, ಮುರುಕಲು ಬುಟ್ಟಿಗಳು ಹಾಗೂ ಹಾಳಾಗಿರುವ ಮಾಲುಗಳು ಇವುಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಎಂದು ಮತ್ತು ಸಾಲ ಯಾರಿಗೆ ಕೊಟ್ಟಿದ್ದಾರೋ ಅದನ್ನು ಹೊರುವ ಜವಾಬುದಾರಿ ಇವರ ಮೇಲೇ ಬರುತ್ತದೆ. ಏನೋ ಹಳೇ ಮಾರಿ ಮನೆ ಬಿಟ್ಟು ಹೋಗಲಿ ಎಂದು ತೆಗೆದರೆ ಅದು ಬೇರೆ ರೀತಿಯಲ್ಲಿ ಮನೆಯ ಒಳಕ್ಕೇ ಬರುವಂತಾದರೆ ಇದರಿಂದ ಸರಕಾರದ ಜವಾಬುದಾರಿ ಏನೂ ಕಡಿಮೆಯಾದ ಹಾಗೆ ಆಗಲಿಲ್ಲ. ಹೊಸದಾಗಿ ಒಂದು ಬೋರ್ಡು ಅಥವಾ ಒಂದು ಸಂಸ್ಥೆ ಎಂದು ಮಾಡಿದ ಮೇಲೆ ಅದರಲ್ಲಿ ಹಿಂದಿನ ಹಳೇ ಮಾಲುಗಳನ್ನೆಲ್ಲಾ ತರುವುದು ಸರಿಯಾದ ನೀತಿಯಲ್ಲ. It is not a good economy in its sense. ಇದನ್ನು ಸರಕಾರ ಪರಿಶೀಲನೆ ಮಾಡಬೇಕು. ಇನ್ನು ಆಡಿಟ್ ರೂಲ್ಸುಗಳ ಯಾವ ರೀತಿ ಇವೆ ಎಂದರೆ ಒಂದು ಸಂಸ್ಥೆಯನ್ನು ಆಡಿಟ್ ಮಾಡಿದ ಮೇಲೆ ಅಂತಹ ಸಂಸ್ಥೆಗಳ ವರದಿಯನ್ನು ಈ ಸದನದ ಮುಂದೆ ತರಬೇಕು ಎಂದು ಇದೆ. ಪ್ರತಿ ವರ್ಷವೂ ಇಂತಹ ವರದಿಗಳು ಸದನದ ಮುಂದೆ ಬರುತ್ತವೆ. ಆ ರೀತಿ ಬರುವುದು it is implied and it is invariably placed before this House ಹಾಗೆ ಬಂದಾಗ ಇದು ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ಆಗ ನೋಡಲು ಅವಕಾಶ ಸಿಗುತ್ತದೆ. ಇದು ಎಲ್ಲಾ ಸ್ಯಾಚುಟರಿ ಬೋರ್ಡಿಗೂ ಅನ್ವಯ ವಾಗುತ್ತದೆ. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸ್ ಮಾಡುತ್ತಾರೆ. ಅವೆಲ್ಲ ಈ ಸದನದ ಮುಂದೆ ಬರುತ್ತದೆಯೇ ?

Sri S. M. KRISHNA.—Article 26 says :

> "The Board shall prepare and forward to the State Government in such manner as may be prescribed, Annual Report within three months from the end of the financial year giving a complete account of the activities of the Board during the previous financial year. Every report shall be placed before the State Legislature as soon as it is received by the State Government."